# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-2649/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 10/04/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಸುಬ್ರಹ್ಮಣ್ಯ, ಕಮಲಶಿಲೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಸುಬ್ರಹ್ಮಣ್ಯ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಉಡುಪಿ ಜಿಲ್ಲೆಯಲ್ಲಿರುವ ಸಹಾಯಕ ಆಯುಕ್ತರಾದ ಶ್ರೀ ದೊಡ್ಡಮನಿ, ಧಾರ್ಮಿಕ ದತ್ತಿ ಇಲಾಖೆ, ಜಿಲ್ಲಾಧಿಕಾರಿಗಳ ಕಛೇರಿ ಸಂಕೀರ್ಣ, ಮಣಿಪಾಲ, ರಜತಾದ್ರಿ, ಉಡುಪಿ ಜಿಲ್ಲೆ ಇವರು ಮತ್ತು ಶೆಟ್ಟಿ ಪಾಲು ಸಚಿದಾನಂದ ಛಾತ್ರ ಮತ್ತು ಇತರರು ಸೇರಿಕೊಂಡು ಕಮಲಶಿಲೆ ಗ್ರಾಮದ ಶ್ರೀ ಕಮಲಶಿಲೆ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಸೇರಿದ ಲಕ್ಷಾಂತರ ಹಣವನ್ನು, ಅಪಾರ ಪ್ರಮಾಣದಲ್ಲಿ ಶ್ರೀಕ್ಷೇತ್ರದ ರಥಕ್ಕೆ ನೀಡಿರುವ ಬೆಳ್ಳಿ ಆಭರಣಗಳು, ಶ್ರೀ ದೇವರ ಶೃಂಗಕ್ಕೆ ಚಿನ್ನ ಮತ್ತು ಬೆಳ್ಳಿ ಆಭರಣಗಳು ಹಾಗೂ ರೂ.40.00 ಲಕ್ಷಕ್ಕೂ ಮೀರಿ ಇದ್ದ ನಗದನ್ನು ಕೊಳ್ಳೆ ಹೊಡೆದು ಬೇನಾಮಿ ಆಸ್ತಿಗಳನ್ನು ಸಂಪಾದಿಸಿರುತ್ತಾರೆ. ಶ್ರೀಕ್ಷೇತ್ರಕ್ಕೆ ಭಕ್ತಾದಿಗಳು ನೀಡಿದ ಒಡವೆಗಳ ಹಣದ ಸೇವಾ ಚೀಟಿಗಳ ಹಣದ ಮತ್ತು ಸೇವಾ ದೇಣಿಗೆಗಳ ಲೆಕ್ಕಾಚಾರವನ್ನು ಕೇಳಿದರೆ ಬಹಿರಂಗ ಪಡಿಸುತ್ತಿಲ್ಲ. ಶ್ರೀ ಕಮಲಶಿಲೆ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಾಲಯ ಮಂಡಳಿಯವರುಗಳಾದ ಶ್ರೀ ಶೆಟ್ಟಿಪಾಲು ಸಚ್ಚಿದಾನಂದ ಛಾತ್ರ ಮತ್ತು ಶ್ರೀನಿವಾಸ ಛಾತ್ರ ಇವರುಗಳು ದೇವಾಡಳಿತ ಆಡಳಿತವನ್ನು ಸ್ಥಳೀಯರನ್ನು ನೇಮಿಸಿಕೊಂಡು ಎದುರುದಾರರ ಕೃಪಾಕಟಾಕ್ಷದಿಂದ ನಡೆಸಿಕೊಂಡು ಬರುತ್ತಿದ್ದಾರೆ, ಸದರಿಯವರು ಆಡಳಿತ ಮಂಡಳಿಯ ಅನುವಂಶಕಿ ಮೊಕ್ತೇಸರಿಕೆಯನ್ನು ಸುಳ್ಳು ವಂಶ ವೃಕ್ಷ ಸೃಷ್ಟಿಸಿ ಗಿಟ್ಟಿಸಿಕೊಂಡಿರುತ್ತಾರೆ. ತಮ್ಮ ಅರ್ಜಿ ಮತ್ತು ಹೇಳಿಕೆಗಳಲ್ಲಿ ಮೂರು ತಲೆಮಾರಿನಿಂದಲೂ ತಮ್ಮ ಪೂರ್ವಿಕರೆ ಮೊಕ್ತೇಸರರು ಆಗಿದ್ದರೂ ಎಂದು ಹೇಳಿಕೊಂಡು ಸಾರ್ವಜನಿಕರಿಗೂ ಹಾಗೂ ಘನ ಸರ್ಕಾರಕ್ಕೆ ಮೋಸ ಮತ್ತು ವಂಚನೆ ಮಾಡಿರುತ್ತಾರೆ. ದೇವಸ್ಥಾನದ ಶೇ.75 ರಷ್ಟು ಕಾಮಗಾರಿಯನ್ನು ಮತ್ತು ಕಾರ್ಯಕ್ರಮಗಳನ್ನು ತಮ್ಮ ಕುಟುಂಬದ ಪೂರ್ವಿಕರೆ ಮಾಡಿಸಿದ್ದಾರೆಂದು ತಹಶೀಲ್ದಾರ್‌ರವರಿಗೆ ನೀಡಿರುವ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಆಡಳಿತ ಮಂಡಳಿಯವರು ನಿಯಮಗಳನ್ನು ಪಾಲಿಸದೇ ಏಕಾಏಕಿ ಬೇಕಾಬಿಟ್ಟಿಯಾಗಿ ವಿವಿಧ ಕಾಮಗಾರಿಗಳನ್ನು, ಕಾರ್ಯಕ್ರಮಗಳನ್ನು ಮತ್ತು ರಚನೆಗಳನ್ನು ಮಾಡಿದ್ದು, ನಿಧಿ ಸಂಗ್ರಹ ಹಾಗೂ ಇನ್ನಿತರೆ ಎಲ್ಲ

ವಿಷಯಗಳಲ್ಲೂ ಅಕ್ರಮವನ್ನು ಎಸಗಿರುತ್ತಾರೆ. 1993 ರಿಂದ 2006 ರವರೆಗಿನ ಆಡಿಟ್ ವರದಿಯಲ್ಲಿ ನ್ಯೂನತೆಗಳನ್ನು ತೋರಿಸಲಾಗಿದೆ. ಆಕ್ಷೇಪಣಾ ತೀರುವಳಿ ಬಾಕಿ ಬೃಹತ್ ಪ್ರಮಾಣದಲ್ಲಿದ್ದು, ಈ ಬಗ್ಗೆ ತನಿಖೆಯಾಗಬೇಕಾಗಿದೆ. 2006ರ ನಂತರದ ಕಾಮಗಾರಿಗಳ ಬಗೆಗೂ ಮತ್ತು ದೇವಸ್ಥಾನದ ವ್ಯವಹಾರಗಳ ಬಗೆಗೂ ಸಹ ತನಿಖೆಯಾಗಬೇಕಾಗಿರುತ್ತದೆ. ಆದ್ದರಿಂದ, ಲಕ್ಷಾಂತರ ಆದಾಯವುಳ್ಳ ಹಾಗೂ ರಾಜ್ಯದ್ಯಾಂತ ಭಕ್ತಾದಿಗಳು ಬರುವ ದೇವಸ್ಥಾನದ ಆಡಳಿತಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯನ್ನು ಸಾರ್ವಜನಿಕ ಸಂಪರ್ಕ ಅಧಿಕಾರಿಯನ್ನು ನೇಮಿಸಬೇಕೆಂದು, ಆಡಳಿತ ಮಂಡಳಿಯನ್ನು ಕ್ಷಿಪ್ರ ಗತಿಯಲ್ಲಿ ವಿಸರ್ಜಿಸಬೇಕೆಂದು ಕೋರಿರುತ್ತಾರೆ.

2. ದೇವಸ್ಥಾನದ ಆಡಳಿತ ಮಂಡಳಿಯಿಂದ ಅವ್ಯವಹಾರಗಳು ನಡೆಯುತ್ತಿದ್ದರೂ, ಯಾರೊಬ್ಬರು ಇದರ ಬಗ್ಗೆ ಪ್ರಶ್ನಿಸುತ್ತಿಲ್ಲ, ಈ ಬಗ್ಗೆ ದೂರು ನೀಡಿದರೂ ಸಹ ಶಂಕರ ನಾರಾಯಣ ಆರಕ್ಷಕ ಠಾಣೆಯ ಠಾಣಾಧಿಕಾರಿ ಮತ್ತು ಸಿಬ್ಬಂದಿ ವೃಂದದವರು ಗೂಂಡಾ ವರ್ತನೆಗೆ ಹೆದರಿ ಯಾರೊಬ್ಬರೂ ದೂರು ಕೊಡಲು ಮುಂದೆ ಬರುತ್ತಿಲ್ಲ. ದೂರು ನೀಡಿದ ಶ್ರೀ ನಾಗಭೂಷನ್ ಭಟ್ ಅವರನ್ನು ಶ್ರೀಕ್ಷೇತ್ರ ಸೇವಾ ಕೌಂಟರ್‌ನೊಳಗೆ ಸಿಸಿ ಕ್ಯಾಮೇರಾ ಆಫ್ ಮಾಡಿ ಗೂಂಡಾಗಳಿಂದ ಹಲ್ಲೆ ನಡೆಸಿ ಕೊಲೆ ಮಾಡಲು ಪ್ರಯತ್ನಿಸಿರುತ್ತಾರೆ. ಆದ್ದರಿಂದ, ಎದುರುದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸಿ ತನಿಖೆಯನ್ನು ಕೈಗೊಂಡು ಅವ್ಯವಹಾರವನ್ನು ತಡೆಗಟ್ಟಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

3. ಸದರಿ ದೂರಿನ ಆಧಾರದ ಮೇಲೆ ಈ ಸಂಸ್ಥೆಯ ದಕ್ಷಿಣ ಕನ್ನಡದ ಆರಕ್ಷಕ ಅಧೀಕ್ಷಕರಿಗೆ ಪ್ರಕರಣವನ್ನು ವಹಿಸಿಕೊಡಲಾಗಿದ್ದು, ಅದರಂತೆ, ಆರಕ್ಷಕ ಅಧೀಕ್ಷಕರು ಪ್ರಕರಣದ ತನಿಖೆಯನ್ನು ಆರಕ್ಷಕ ನಿರೀಕ್ಷಕರಿಗೆ ವಹಿಸಿರುತ್ತಾರೆ. ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರು ಇವರು ತನಿಖೆಯನ್ನು ನಿರ್ವಹಿಸಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಪ್ರಕರಣದ ದೂರಿಗೆ ಸಂಬಂಧಿಸಿದಂತೆ ಸಹಾಯಕ ಆಯುಕ್ತರ ಕಛೇರಿಯಿಂದ ಸಂಬಂಧಪಟ್ಟ ದಾಖಲೆಗಳನ್ನು ಪಡೆದು ಪರಿಶೀಲಿಸಲಾಗಿ, ದೇವಸ್ಥಾನದ ಲೆಕ್ಕಪತ್ರದ ಬಗ್ಗೆ ಆಡಿಟ್ ವರದಿಯನ್ನು ಹಾಜರುಪಡಿಸಿದ್ದು, ಸದರಿ ದೇವಸ್ಥಾನದಲ್ಲಿ 1993 ರಿಂದ 2005–06ರವರೆಗೆ ಮಾತ್ರ ಲೆಕ್ಕಪರಿಶೋಧನೆ ನಡೆದಿರುವುದು ಕಂಡು ಬರುತ್ತದೆ. 2007 ರಿಂದ 2015 ರವರೆಗೆ ಲೆಕ್ಕಪರಿಶೋಧನೆ ಮಾಡಿರುವುದು ಕಂಡು ಬಂದಿರುವುದಿಲ್ಲ. 1993 ರಿಂದ 2005–06ನೇ ಸಾಲಿನ ವರೆಗೆ ಆಡಿಟ್ ವರದಿಯಲ್ಲಿ ಕೆಲವು ನ್ಯೂನತೆಗಳನ್ನು ತೋರಿಸಿದ್ದು, ಅವುಗಳಲ್ಲಿ ಕೆಲವೊಂದನ್ನು ಮಾತ್ರ ಸರಿಪಡಿಸಲಾಗಿರುತ್ತದೆ. ಲೆಕ್ಕಪರಿಶೋಧನಾ ಸಹಾಯಕ ನಿಯಂತ್ರಕರ ವರದಿ ಪ್ರಕಾರ ರೂ.40.00 ಲಕ್ಷ ಅಷ್ಟು ಮೊಬಲಗು ಇದ್ದು, ಇದಕ್ಕೆ ಆಡಳಿತ ಮೊಕ್ತೇಸರರು ಉತ್ತರವನ್ನು ನೀಡಿರುತ್ತಾರೆ. 2007ರ ನಂತರ ಲೆಕ್ಕಪತ್ರಗಳ ಆಡಿಟ್ ಮಾಡದೇ ಇರುವುದರಿಂದ ಯಾವುದೇ ರೀತಿಯ ದುರುಪಯೋಗ ಆಗಿದೆಯೋ ಇಲ್ಲವೋ ಎಂದು ತಿಳಿಯಲು ಸಾಧ್ಯವಾಗದಕಾರಣ, ಆದಷ್ಟು ಬೇಗ

ಆಡಿಟ್ ಮಾಡಿಸುವಂತೆ ಸಹಾಯಕ ಆಯುಕ್ತರಿಗೆ ಸೂಚನೆ ನೀಡಬಹುದಾಗಿರುತ್ತದೆ. ದೇವಸ್ಥಾನದಲ್ಲಿ 1993–94ನೇ ಸಾಲಿನಿಂದ 2013–14ನೇ ಸಾಲಿನ ವರೆಗೆ ಜಮಾ ಖರ್ಚು ತ:ಖ್ತೆ ನಿರ್ವಹಿಸಿರುವುದು ಕಂಡು ಬರುತ್ತದೆ. ಪ್ರತಿ ವರ್ಷ ಧಾರ್ಮಿಕ ದತ್ತಿ ಇಲಾಖಾ ವತಿಯಿಂದ ದೇವಸ್ಥಾನದ ತಪಶೀಲು ಪಟ್ಟಿ ರಿಜಿಸ್ಟರ್‌ಗೆ ಅನುಸಾರವಾಗಿ ದೇವಸ್ಥಾನದ ಆಭರಣಗಳು ಮತ್ತು ಇನ್ನಿತರೆ ವಸ್ತುಗಳ ಆಸ್ತಿಗಳ ಸತ್ಯಾಪನೆ ಮಾಡಿ ವರದಿಯನ್ನು ಸಮಿತಿಗೆ ಮತ್ತು ನೇಮಿಸಲಾದ ಪ್ರಾಧಿಕಾರಕ್ಕೆ ನೀಡಬೇಕಾಗಿರುತ್ತದೆ.

4. ಸಹಾಯಕ ಆಯುಕ್ತರ ಕಛೇರಿಯಿಂದ ದೇವಸ್ಥಾನದ ಆರ್ಥಿಕ ವರ್ಷದ ಕೊನೆಯಲ್ಲಿ ಸೇರ್ಪಡೆಯಾಗಿರುವ ಚಿನ್ನ, ಬೆಳ್ಳಿಗಳ ಪಟ್ಟಿಯನ್ನು ಪರಿಶೀಲನೆಗೆ ಕಳುಹಿಸಿಕೊಡುವಂತೆ ಪತ್ರ ಬರೆಯಲಾಗಿದ್ದು, ಆದರೆ, ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲವೆಂದು ಸಹಾಯಕ ಆಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ದೂರುದಾರರು ಹಾಜರುಪಡಿಸಿರುವ ವಂಶವೃಕ್ಷವನ್ನು ಪರಿಶೀಲಿಸಿದಾಗ ಶ್ರೀ ತೇಜಪ್ಪಶೆಟ್ಟಿಯವರು ಮೊಕ್ತೇಸರಿಕೆ ಮಾಡಿದ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ. ಆದರೆ, ಶ್ರೀ ತೇಜಪ್ಪಶೆಟ್ಟಿಯ ತಾಯಿ ಶ್ರೀಮತಿ ಧಾರಮ್ಮ ಶೆಡ್ತಿಯಾಗಿದ್ದು, ಪ್ರಕರಣದಲ್ಲಿ ಹಾಜರುಪಡಿಸಿರುವ ವಂಶವೃಕ್ಷವನ್ನು ಪರಿಶೀಲಿಸಿದಾಗ ಶ್ರೀ ತೇಜಪ್ಪಶೆಟ್ಟಿ ಹಾಗೂ ಚಂದ್ರಪ್ಪಶೆಟ್ಟಿ ನಡುವೆ ಮೊಕ್ತೇಸರಿಕೆ ಮಾಡಿದ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ. ಶ್ರೀ ತೇಜಪ್ಪಶೆಟ್ಟಿಯ ತಾಯಿ ಕಾವೇರಿಶೆಡ್ತಿಯವರ ಸಹೋದರ ಮಂಜಯ್ಯ ಶೆಟ್ಟಿಯವರು ಮೊಕ್ತೇಸರಿಕೆ ಮಾಡಿರುವ ಬಗ್ಗೆ ಸ್ಥಳೀಯರು ತಿಳಿಸಿದ್ದು, ಈ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ The Madras Hindu Religious and Charitable Endowment Act 1951 ರ Chapter 5 ರ ಕಲಂ 57 (ಬಿ) ಯಂತೆ ಜಿಲ್ಲಾಧಿಕಾರಿಯವರು ಅನುವಂಶಿಕೆ ಮೊಕ್ತೇಸರಿಕೆ ಬಗ್ಗೆ ವಿಚಾರಣೆ ನಡೆಸಿ ಆದೇಶ ಮಾಡುವ ಅಧಿಕಾರವಿದ್ದು, ಅದರಂತೆ, ದಿ:08/11/1999 ರಂದು ಜಿಲ್ಲಾಧಿಕಾರಿಯವರು ಆದೇಶ ಮಾಡಿರುತ್ತಾರೆ. ಇಲಾಖಾ ನಿಯಮಗಳನ್ನು ಸರಿಯಾಗಿ ಪರಿಪಾಲಿಸದೇ, ಆಡಳಿತ ಮಂಡಳಿಯವರು ಕಾಮಗಾರಿ ಹಾಗೂ ರಚನೆಗಳನ್ನು ಮಾಡಿರುತ್ತಾರೆಂಬುದರ ಬಗ್ಗೆ ದಾಖಲೆಗಳನ್ನು ಪರಿಶೀಲಿಸಲಾಗಿ 1994 ರಿಂದ 2005–06ರವರೆಗೆ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ಆಡಳಿತ ಮಂಡಳಿಯವರು ಲಿಖಿತವಾಗಿ ವಿವರ ನೀಡಿದ್ದು, ಕಾಮಗಾರಿಗಳನ್ನು ಟೆಂಡರ್ ಮುಖೇನ ದೇವಸ್ಥಾನದ ವತಿಯಿಂದ ತುಂಡು ಗುತ್ತಿಗೆಯಲ್ಲಿ ನಿರ್ವಹಿಸಲಾಗಿರುತ್ತದೆ. ಈ ಬಗ್ಗೆ ಲಿಖಿತವಾಗಿ ಎದುರುದಾರರು ತಿಳಿಸಿರುತ್ತಾರೆ.

5. ಆಡಳಿತ ಮಂಡಳಿಯವರು ಬಾರಿ ಅವ್ಯವಹಾರ ಮಾಡಿದ್ದು ಮತ್ತು 1993 ರಿಂದ 2006ರವರೆಗೆ ಮಾಡಿದ ಆಡಿಟ್ ವರದಿಯಲ್ಲಿ ತೋರಿಸಲಾಗಿದ್ದ ಆಕ್ಷೇಪಣಾ ತೀರುವಳಿ ಬಾಕಿ ಇದ್ದು, ಆಡಿಟ್ ವರದಿ ಪ್ರಕಾರ ಪ್ರತಿ ವರ್ಷ ನ್ಯೂನತೆಗಳು ಕಾಣಿಸಿದ್ದು, ಅವುಗಳಲ್ಲಿ ಕೆಲವೊಂದು ನ್ಯೂನತೆಗಳನ್ನು ಮಾತ್ರ ಸರಿಪಡಿಸಿರುವುದು ಕಂಡು ಬರುತ್ತದೆ. ಆಕ್ಷೇಪಣಾ ತೀರುವಳಿ ಬಾಕಿ ಮೊತ್ತವು ಸುಮಾರು ರೂ.40.00 ಲಕ್ಷದಷ್ಟಿದ್ದು, ದೇವಸ್ಥಾನದ ಆಡಳಿತ ಮಂಡಳಿಯವರು ಇದಕ್ಕೆ ಉತ್ತರ ನೀಡಿರುತ್ತಾರೆ. ಈ ಬಗ್ಗೆ ಸಹಾಯಕ ಆಯುಕ್ತರು ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿರುತ್ತದೆ. 2006ರ ನಂತರ

ಆಡಿಟ್ ಮಾಡದೇ ಇರುವುದರಿಂದ, ಎಷ್ಟು ನ್ಯೂನತೆಗಳು ಇವೆ, ನಿಧಿ, ಚಿನ್ನ, ಬೆಳ್ಳಿ ಸಂಗ್ರಹದಲ್ಲಿ ಅವ್ಯವಹಾರ ಆಗಿದೆ ಎಂಬುದರ ಬಗ್ಗೆ ತಿಳಿದು ಬರುವುದಿಲ್ಲ. ಆದ್ದರಿಂದ, 2006 ರಿಂದ ನಂತರದ ಅವಧಿಗೆ ಲೆಕ್ಕಪರಿಶೋಧನೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ದಿ:10/01/2011 ರಂದು ಶ್ರೀ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಕಳ್ಳತನವಾಗಿದ್ದ ಬಗ್ಗೆ ಶಂಕರ ನಾರಾಯಣ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕರು ತನಿಖೆಯನ್ನು ಜವಾಬ್ದಾರಿಯುತವಾಗಿ ನಿರ್ವಹಿಸಿರುತ್ತಾರೆ. ಆದ್ದರಿಂದ, ದೂರುದಾರರು ಮಾಡಿರುವ ಆರೋಪ ಮೇಲ್ನೋಟಕ್ಕೆ ಸಾಬೀತಾಗಿಲ್ಲವೆಂದು ಕಂಡು ಬರುತ್ತದೆ ಎಂದು ಇದಲ್ಲದೇ ಪ್ರಕರಣದ ತನಿಖೆ ಕಾಲದಲ್ಲಿ ಆರೋಪಿ ಪತ್ತೆಯಾಗದಕಾರಣ ಹಾಗು ಪೊಲೀಸರು ಸ್ಥಳಕ್ಕೆ ಬರುವ ಮೊದಲೇ ಸದರಿ ಪ್ರಕರಣದಲ್ಲಿ ಸಮಗ್ರ ತನಿಖೆ ನಡೆಸಿ 'ಸಿ' ಅಂತಿಮ ವರದಿಯನ್ನು ಸಲ್ಲಿಸಲಾಗಿರುತ್ತದೆ. ಸರ್ವೇ ನಂಬರ್ 101 ಸರ್ಕಾರಿ ಸ್ಥಳವಾಗಿದ್ದು, ಸದರಿ ಸ್ಥಳದಲ್ಲಿ ಗುಡ್ಡವನ್ನು ಸಮತಟ್ಟು ಮಾಡಿದ ಬಗ್ಗೆ ಕಂದಾಯ ಇಲಾಖೆಯಿಂದ ಯಾವುದೇ ಅನುಮತಿ ಬಂದಿರುವುದಿಲ್ಲ. ಅಕ್ರಮ ಸಕ್ರಮದಡಿಯಲ್ಲಿ ಕಮಲಶಿಲೆ ಶ್ರೀ ಬ್ರಾಹ್ಮಿ ದುರ್ಗಾ ಪರಮೇಶ್ವರಿ ದೇವಸ್ಥಾನಕ್ಕೆ ಇದುವರೆಗೆ ಯಾವುದೇ ಮಂಜೂರಾತಿ ಬಂದಿರುವುದಿಲ್ಲ. ಮಂಜೂರಾತಿ ಕೋರಿ ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಇಲಾಖೆಯವರು ತಿಳಿಸಿರುತ್ತಾರೆ.

6. ದೇವಸ್ಥಾನದ ಮೊಕ್ತೇಸರರು ದಿ:29/01/2011 ರಂದು ಮಾನ್ಯ ಜಿಲ್ಲಾಧಿಕಾರಿಗಳು, ಉಡುಪಿಯವರಿಗೆ ಅವರು ಕೇಳಿದ್ದ ಮಾಹಿತಿಗೆ ಉತ್ತರ ನೀಡಿದ್ದು, ಸದರಿ ಪತ್ರದಲ್ಲಿನ ಉತ್ತರಕ್ಕೂ ಸಹಾಯಕ ಆಯುಕ್ತರು ಉಡುಪಿ ಇವರು ದಿ:06/02/2013 ರಂದು ಅವರು ಕೋರಿದ್ದ ಮಾಹಿತಿಗೆ ನೀಡಿದ್ದ ಉತ್ತರಕ್ಕೂ ಹೋಲಿಕೆಯಾಗುವುದಿಲ್ಲವಾಗಿ ದೂರುದಾರರು ತಿಳಿಸಿದ್ದು, ಅದನ್ನು ಪರಿಶೀಲಿಸಿದಲ್ಲಿ ದೇವಸ್ಥಾನದ ರಥಬೀದಿಯು ಕಿರಿದಾಗಿದ್ದು, ರಥೋತ್ಸವ ಸಮಯ ಭಕ್ತಾಧಿಗಳ ದಟ್ಟಣೆ ಹೆಚ್ಚಾಗಿದ್ದು, ಸ್ಥಳಾವಕಾಶ ಕೊರತೆಯಾದ್ದರಿಂದ, ದೇವಸ್ಥಾನದ ಎದುರಿಗಿರುವ ಸರ್ವೇ ನಂ.101ರ ಗುಡ್ಡವನ್ನು ಕಡೆದು ಮಣ್ಣು ತೆಗೆದು ಸಮತಟ್ಟು ಮಾಡಿ ಸ್ಥಳಾವಕಾಶ ಕಲ್ಪಿಸುವುದೆಂದು, ಈ ಕೆಲಸಕ್ಕೆ ದೇವಸ್ಥಾನದ ಭಂಡಾರದಿಂದ ಸ್ವಲ್ಪ ಹಣ ವ್ಯಯಿಸಲಾಗಿದೆ ಎಂದು ಮಾಹಿತಿ ನೀಡಿರುತ್ತಾರೆ. ಆದರೆ, ಡಾ. ಸತೀಶ್ ಕೃಷ್ಣ ರಾವ್‌ರವರು ಮಾಹಿತಿ ಹಕ್ಕಿನ ಅರ್ಜಿ ಸಂಬಂಧ ಸಹಾಯಕ ಆಯುಕ್ತರು, ಹಿಂದು ಧಾರ್ಮಿಕ ಸಂಸ್ಥೆ ಮತ್ತು ಧರ್ಮದಾಯಿತ ದತ್ತಿ ಉಂಬಳಿ ಇಲಾಖೆಯವರ ಪತ್ರ ಸಂ:ಸಿಆರ್ 39 2012-13ರಲ್ಲಿ ಆಡಳಿತ ಮೊಕ್ತೇಸರರು ದೇವಸ್ಥಾನದ ಲೆಟರ್ ಹೆಡ್‌ನಲ್ಲಿ ಮಾಹಿತಿ ನೀಡಿದ್ದು, ಅದರಲ್ಲಿ ಸರ್ವೇ ನಂ.101ರಲ್ಲಿ ಗುಡ್ಡ ಕಡೆದು ನೆಲಸಮತಟ್ಟು ಮಾಡುವ ಕಾಮಗಾರಿಗಳನ್ನು ಭಕ್ತರೆಲ್ಲರೂ ಸೇರಿ ನಿರ್ವಹಿಸಿದ ಕಾಮಗಾರಿಯಾಗಿದ್ದು, ಅದರ ಖರ್ಚು ವೆಚ್ಚಗಳಿಗೆ ಸಂಬಂಧಿಸಿದಂತೆ ದೇವಸ್ಥಾನಕ್ಕೆ ಯಾವುದೆ ರೀತಿಯ ಮಾಹಿತಿ ಇರುವುದಿಲ್ಲ.

7. ದೇವಸ್ಥಾನದ ಉತ್ಸವ ಸಮಯದಲ್ಲಿ ಸಾರ್ವಜನಿಕರಿಗೆ ಅನುಕೂಲವಾಗಲೆಂದು ಸಾರ್ವಜನಿಕರು ಮತ್ತು ಭಕ್ತಾಧಿಗಳೆಲ್ಲ ಸೇರಿ ಹಣವನ್ನು ಹೊಂದಿಸಿ ಸಾರ್ವಜನಿಕರ ವತಿಯಿಂದ ಕಾಮಗಾರಿಯನ್ನು

ಪೂರೈಸಿ ದೇವಸ್ಥಾನದ ಪ್ರಾಂಗಣವನ್ನು ಸಮತಟ್ಟುಗೊಳಿಸಿ ದೇವಸ್ಥಾನದ ಎದುರು ಇರುವ ತಗ್ಗು ಜಾಗಕ್ಕೆ ಅದೇ ಮಣ್ಣನ್ನು ಹಾಕಿ ಸಾರ್ವಜನಿಕರ ಉದ್ದೇಶಕ್ಕೆ ಸ್ಥಳ ಕಲ್ಪಿಸಿಕೊಡಲಾಗಿರುತ್ತದೆ. ಈ ಕಾರ್ಯಗಳಲ್ಲಿ ಮತ್ತು ಕಾಮಗಾರಿಯಲ್ಲಿ ದೇವಸ್ಥಾನದ ಯಾವುದೇ ಪಾತ್ರ ಇರುವುದಿಲ್ಲ. ಆದ್ದರಿಂದ, ಮಾಹಿತಿಯಲ್ಲಿ ನೀಡಿರುವ ವ್ಯತ್ಯಾಸಗಳಿಂದ ಇದು ಸಾರ್ವಜನಿಕ ಉದ್ದೇಶಕ್ಕೆ ಆಗಿರುವ ಹಿನ್ನೆಲೆಯಲ್ಲಿ ಮತ್ತು ದೇವಸ್ಥಾನದ ವತಿಯಿಂದ ಯಾವುದೇ ಕಾಮಗಾರಿ ಆಗದೆ ಇರುವ ಹಿನ್ನೆಲೆಯಲ್ಲಿ, ಆಗಿರುವ ತಪ್ಪನ್ನು ಸರಿಪಡಿಸಲು ಅವಕಾಶ ಮಾಡಿಕೊಡಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಇನ್ನು ದೇವಸ್ಥಾನಕ್ಕೆ ಕಾರ್ಯನಿರ್ವಾಹಣಾಧಿಕಾರಿಯನ್ನು ಮತ್ತು ಸಾರ್ವಜನಿಕ ಸಂಪರ್ಕಾಧಿಕಾರಿಯನ್ನು ನೇಮಿಸವ ಬಗ್ಗೆ ಇರುವ ಆರೋಪದ ಬಗ್ಗೆ ಸರ್ಕಾರವೇ ತೀರ್ಮಾನ ಕೈಗೊಳ್ಳಬೇಕಾಗಿರುತ್ತದೆ. 2006 ರ ನಂತರ ಆಡಿಟ್ ಆಗದ ಕಾರಣ, ದೇವಸ್ಥಾನದ ಹಣ, ಚಿನ್ನಭರಣ ದುರುಪಯೋಗವಾಗಿರುವ ಬಗ್ಗೆ ತಿಳಿದು ಬರುವುದಿಲ್ಲ. ಆದ್ದರಿಂದ, ಕೂಡಲೇ ಆಡಿಟ್ ವರದಿ ತಯಾರಿಸಲು ಸಹಾಯಕ ಆಯುಕ್ತರು, ಉಡುಪಿಯವರಿಗೆ ಸೂಚಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

8. ಶ್ರೀ ಕ್ಷೇತ್ರದ ಸಹಾಯಕ ಅರ್ಚಕ ಮೂಲ್ಕಿ ಗುರುಪ್ರಸಾಧ್ ಭಟ್ ಎನ್ನುವವರು ದೇವಾಲಯಗಳ ಚಿನ್ನಭರಣಗಳನ್ನು ಅಪಹರಿಸಿರುತ್ತಾರೆ. ಶ್ರೀ ಕ್ಷೇತ್ರದ ಮ್ಯಾನೇಜರ್ ಗುರುಮೂರ್ತಿ ಭಟ್ ರವರೊಂದಿಗೆ ಸಮನಾಗಿ ಹಂಚಿಕೊಂಡಿರುತ್ತಾರೆ. ಅದೇ ಕಾರಣಕ್ಕಾಗಿ ಗುರುಪ್ರಸಾದ್ ಭಟ್ ರನ್ನು ಅರ್ಚಕರಾಗಿ ಸೇರಿಸಿಕೊಂಡಿದ್ದು, ಶ್ರೀಕ್ಷೇತ್ರದ ದೇವರ ಚಿನ್ನಾಭರಣಗಳನ್ನು ಅಪಹರಿಸಲು ಮ್ಯಾನೇಜರ್ ಗುರುಮೂರ್ತಿ ಭಟ್‌ರವರು ಈತನನ್ನು ನಿಯೋಜಿಸಿಕೊಂಡಿದ್ದು, ಪ್ರಸ್ತುತ ಶ್ರೀಕ್ಷೇತ್ರದ ಕಳವು ಪ್ರಕರಣದಲ್ಲಿ ಇವರ ಕೈವಾಡ ಇರುತ್ತದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ತನಿಖಾಧಿಕಾರಿಯವರು ಶ್ರೀ ಗುರುಪ್ರಸಾದ್ ಭಟ್‌ರವರು 11 ವರ್ಷದಿಂದ ದೇವಸ್ಥಾನದಲ್ಲಿ ಮ್ಯಾನೇಜರ್ ಎಂದು ಕೆಲಸ ನಿರ್ವಹಿಸಿಕೊಂಡು ಹೋಗುತ್ತಿರುತ್ತಾರೆ. ದೂರುದಾರರಾದ ಶ್ರೀ ಸುಬ್ರಹ್ಮಣ್ಯ ಇವರು ಕಮಲಶೆಲೆ ಶ್ರೀ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಾಲಯದಲ್ಲಿ ಬದಲಿ ಪೂಜಾ ಸಹಾಯಕರಾಗಿ ಕೇವಲ 10 ದಿನ ಕೆಲಸ ನಿರ್ವಹಿಸಿರುತ್ತಾರೆ. ಇವರು ಕಮಲಶಿಲೆಯ ವಾಸಿಗಳಾಗಿರುವುದಿಲ್ಲ. 10 ದಿನ ಬದಲಿ ಸಹಾಯಕರಾಗಿ ಕೆಲಸ ಮಾಡಿದ ಸುಬ್ರಹ್ಮಣ್ಯರವರಿಗೆ ಸಲ್ಲಬೇಕಾದ ಸಂಬಳವನ್ನು ನೀಡಿ ನಂತರ ಕೆಲಸದಿಂದ ತೆಗೆಯಲಾಗಿರುತ್ತದೆ. ಅವರ ಸ್ವಂತ ಬುದ್ಧಿಯಿಂದ ಆಪಾದನೆ ಮಾಡಿರುವುದು ಸಂದೇಹಾಸ್ಪದವಾಗಿರುತ್ತದೆ. ದೇವಸ್ಥಾನದ ಆಡಳಿತ ಮಂಡಳಿ ವಿರುದ್ಧ ಸ್ಥಳೀಯ ಕೆಲವು ವ್ಯಕ್ತಿಗಳು ದೂರುದಾರರಂತಹ ಅಮಾಯಕ ವ್ಯಕ್ತಿಗಳನ್ನು ಎತ್ತಿಕಟ್ಟಿ ಇಂತಹ ದೂರು ಅರ್ಜಿಗಳನ್ನು ಕೊಡಿಸಿರುವುದಾಗಿರುತ್ತದೆ. ಬದಲಿ ಪೂಜಾ ಸಹಾಯಕನಾಗಿ ಬಂದ ಈತನಿಗೆ ದೇವಸ್ಥಾನದ ಹೆಚ್ಚಿನ ಮಾಹಿತಿ ಇರುವುದಿಲ್ಲ.

9. ಸಹಾಯಕ ಅರ್ಚಕರಾಗಿದ್ದ ಗುರುಪ್ರಸಾದ್ ಭಟ್‌ರವರ ಬಗ್ಗೆ ವಿಚಾರಿಸಲಾಗಿ ಅವರ ಮೇಲೆ ಯಾವುದೇ ಕಳ್ಳತನದ ಆರೋಪವಾಗಲೀ ಅಥವಾ ಪ್ರಕರಣವಾಗಲೀ ಕಂಡು ಬಂದಿರುವುದಿಲ್ಲ. ಈ ಬಗ್ಗೆ ಶ್ರೀ ಹರಿಕೃಷ್ಣ ಪುನರೂರು ಇವರನ್ನು ವಿಚಾರಿಸಲಾಗಿ ಇವರು ಶ್ರೀ ಗುರುಪ್ರಸಾದ್ ಭಟ್ ಇವರು ಒಳ್ಳೆ

ಗುಣಸ್ವಾಭಾವದವರಾಗಿರುತ್ತಾರೆಂದು ತಿಳಿಸಿರುತ್ತಾರೆ. ಆದ್ದರಿಂದ, ದೂರುದಾರರು ಮಾಡಿರುವ ಆರೋಪ ದೃಢಪಟ್ಟಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

10. ಧಾರ್ಮಿಕ ದತ್ತಿ ಹಾಗೂ ಉಂಬಳಿ ಇಲಾಖೆಯ ಸಹಾಯಕ ಆಯುಕ್ತರಾದ ಶ್ರೀ ದೊಡ್ಡಮನಿರವರು ಆಡಳಿತ ಮಂಡಳಿಯವರ ಹಣದ ಆಮಿಶಕ್ಕೆ ಒಳಗಾಗಿ ಆಡಳಿತ ಮಂಡಳಿಯವರ ಕಾನೂನುಬಾಹಿರ ಕೆಲಸಕ್ಕೆ ಬೆಂಗಾವಲಾಗಿ ನಿಂತಿರುತ್ತಾರೆಂದು ದೂರುದಾರರು ಮಾಡಿರುವ ಆರೋಪದ ಬಗ್ಗೆ ತನಿಖಾಧಿಕಾರಿಯವರು ಗುಪ್ತ ಮಾಹಿತಿ ಸಂಗ್ರಹಿಸಿ ಸದರಿ ದೂರಿನ ಅಂಶಗಳು ಸಾಬೀತುಪಡಿಸುವಂತಹ ಸಾಕ್ಷ್ಯಾಧಾರಗಳು ಕಂಡು ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಶ್ರೀ ಸಚಿದಾನಂದ ಭಾತ್ರರು ಬೇನಾಮಿ ಆಸ್ತಿ ಮಾಡಿರುವ ಬಗೆಗೂ ಸಹ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಾಗಿರುವುದಿಲ್ಲವೆಂದು ಮತ್ತು ಸದರಿಯವರು ಯಾವುದೇ ಬ್ಯಾಂಕ್‌ಗಳನ್ನು ತೆಗೆದಿರುವುದಾಗಲೀ ಅಥವಾ ಬ್ಯಾಂಕ್‌ಗಳನ್ನು ಸ್ವತ: ನಿರ್ವಹಿಸಿ ತಮ್ಮ ಅಕ್ರಮ ಸಂಪಾದನೆಯನ್ನು ಬ್ಯಾಂಕ್‌ಗಳಲ್ಲಿ ತೊಡಗಿಸಿರುವುದು ಕಂಡು ಬಂದಿಲ್ಲವೆಂದು ತನಿಖಾಧಿಕಾರಿಯವರು ತಿಳಿಸಿರುವ ಹಿನ್ನೆಲೆಯಲ್ಲಿ, ಎದುರುದಾರರ ವಿರುದ್ಧ ದೂರುದಾರರು ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

11. ಸದರಿ ತನಿಖಾ ವರದಿಯ ಆಧಾರದ ಮೇಲೆ ದೂರುದಾರರ ಪ್ರತ್ಯುತ್ತರ ಕರೆಯಲಾಗಿದ್ದು, ದೂರುದಾರರು ತಮ್ಮ ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಇದರಲ್ಲಿ ತನಿಖಾಧಿಕಾರಿಯವರು ಮೇಲೆ ತಿಳಿಸಿದಂತೆ ನೀಡಿರುವ ವರದಿ ನ್ಯಾಯಸಮ್ಮತವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ದೂರುದಾರರು ಗೌರವಾನ್ವಿತ ಉಪಲೋಕಾಯುಕ್ತರ ಮುಂದೆ ಉಭಯ ಪಕ್ಷಗಳ ನಡುವೆ ಮಾತುಕತೆಯಾಗಬೇಕೆಂದು ತಿಳಿಸಿರುತ್ತಾರೆ. ಅದರಂತೆ, ದಿ:29/12/2015 ರಂದು ಧಾರ್ಮಿಕ ದತ್ತಿ ಇಲಾಖೆಯ ತಹಶೀಲ್ದಾರ್ ಶ್ರೀ ಸಚ್ಚಿದಾನಂದ ಶೆಟ್ಟಿ ಮತ್ತು 3ನೇ ಎದುರುದಾರರ ವಕೀಲರು ಹಾಜರಾಗಿರುತ್ತಾರೆ. ಈ ಸಮಯದಲ್ಲಿ ದೂರುದಾರರು ಸಹ ಹಾಜರಾಗಿರುತ್ತಾರೆ. 1ನೇ ಮತ್ತು 3ನೇ ಎದುರುದಾರರ ವಕೀಲರು ಹಾಜರಾಗಿದ್ದು, ಅವರ ಮೂಲಕ 1 ಮತ್ತು 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಆದರೆ, ದೂರುದಾರರು ತಮ್ಮ ವಕೀಲರು ಸಿಗಲಿಲ್ಲವೆಂದು ತಿಳಿಸಿರುತ್ತಾರೆ. 3ನೇ ಎದುರುದಾರರ ವಕೀಲರು ಈ ದೂರಿಗೆ ಸಂಬಂಧಿಸಿದ ವಿಷಯದ ಬಗ್ಗೆ ಈಗಾಗಲೇ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರ ಮುಂದೆ ಪ್ರಕರಣವಿದ್ದು, ಅದರಲ್ಲಿ ಮಾನ್ಯ ಆಯುಕ್ತರು ತಮ್ಮ ತೀರ್ಪನ್ನು ನೀಡಿರುತ್ತಾರೆ. ಇದಲ್ಲದೇ, 3ನೇ ಎದುರುದಾರರ ವಕೀಲರು ಆಡಳಿತ ಮಂಡಳಿಯ ಅಧ್ಯಕ್ಷರ ಸ್ಥಾನವು ವಂಶಪಾರಂಪರೆಯಾಗಿ ಬಂದಂತಹ ಹುದ್ದೆಯಾಗಿರುತ್ತದೆ. ಆದ್ದರಿಂದ, ಸದರಿ ದೇವಸ್ಥಾನವು ವಂಶಪಾರಂಪರೆಯಾಗಿ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಇರುವುದರಿಂದ ಹಾಗೂ ಸದರಿ ದೇವಸ್ಥಾನದ ಆಡಳಿತವು ವಂಶ ಪಾರಂಪರ್ಯವಾಗಿ ಇರುವ ಆಡಳಿತಾಧಿಕಾರಿಯವರ ಕೈಯಲ್ಲಿ ಇರುವುದರಿಂದ, ಸದರಿ ದೇವಸ್ಥಾನವು ಖಾಸಗಿ ವ್ಯಕ್ತಿಗಳ ವಂಶಪಾರಂಪರ್ಯವಾಗಿ ಬಂದಂತಹ ಆಸ್ತಿಯಾಗಿರುತ್ತದೆ ಎಂದು ತಿಳಿಸಿರುವುದು ಕಂಡು

ಬರುತ್ತದೆ. ತಹಶೀಲ್ದಾರ್‌ರವರು ಹಾಜರಿದ್ದು, ಸದರಿಯವರು ಕೂಡ ದೇವಸ್ಥಾನದ ಆಡಳಿತವು ಖಾಸಗಿ ವ್ಯಕ್ತಿಗಳ ವಂಶಪಾರಂಪರ್ಯವಾಗಿ ಬಂದ ಆಡಳಿತ ಹುದ್ದೆಯಾಗಿರುತ್ತದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ, ಸದರಿ ಕಮಲಶಿಲೆಯ ಶ್ರೀ ಬ್ರಾಹ್ಮೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಆಡಳಿತ ಮೊಕ್ತೇಸರರ ಹುದ್ದೆಯು ವಂಶಪಾರಂಪರ್ಯ ಹುದ್ದೆಯಾಗಿರುತ್ತದೆ ಎಂದು ತಿಳಿಸಿರುವ ಹಿನ್ನೆಲೆಯಲ್ಲಿ, ದೂರುದಾರರು ನೀಡಿರುವ ದೂರಿನ ಬಗ್ಗೆ ತನಿಖೆ ನಿರ್ವಹಿಸಲು ಈ ಸಂಸ್ಥೆಗೆ ಅಧಿಕಾರ ವ್ಯಾಪ್ತಿ ಇರುವುದಿಲ್ಲವೆಂದು (jurisdiction) ತಿಳಿಸಿರುತ್ತಾರೆ.

12. ಇದಲ್ಲದೇ, ಅನುವಂಶಿಕ ಮೊಕ್ತೇಸರಿಕೆ ಬಗ್ಗೆ ದಾಖಲೆಗಳನ್ನು ಪರಿಶೀಲಿಸಲಾಗಿ, ಆಡಳಿತ ಮೊಕ್ತೇಸರರು ಈ ಹಿಂದೆ ಜಿಲ್ಲಾಧಿಕಾರಿಗಳು ಮುಂದೆ ಹಾಜರುಪಡಿಸಿರುವ ವಂಶವಳಿಗೂ ಹಾಗೂ ಬೈಂದೂರು ತಹಶೀಲ್ದಾರ್‌ರವರು ನೀಡಿದ್ದ ವಂಶವೃಕ್ಷಕ್ಕೂ ವ್ಯತ್ಯಾಸವಿರುವುದು ಕಂಡು ಬರುತ್ತದೆ. ಆದರೆ, ಗೋವಿಂದ ಭಾತ್ರ, ಕೇಶವ ಭಾತ್ರ, ಚಂದ್ರಶೇಕರ್ ಭಾತ್ರ ಆಡಳಿತ ಮೊಕ್ತೇಸರಿಕೆ ಮಾಡಿರುವುದರಿಂದ, ಕುಟುಂಬದವರು ಅನುವಂಶಿಕೆವಾಗಿ ಆಡಳಿತ ಮೊಕ್ತೇಸರಿಕೆ ಮಾಡಿರುವುದು ಕಂಡು ಬರುತ್ತದೆ. ಅದೇ ರೀತಿ ಶ್ರೀ ಶ್ರೀನಿವಾಸ ಭಾತ್ರ ಹಾಗೂ ಚಂದ್ರಶೇಖರ್ ಶೆಟ್ಟಿ ರವರ ಬಗ್ಗೆ ಕುಂದಾಪುರ ತಹಶೀಲ್ದಾರ್ ರವರು ನೀಡಿರುವ ಮಾಹಿತಿಯಂತೆ ಅನುವಂಶಿಕೆ ಮೊಕ್ತೇಸರಿಕೆ ಮಾಡಿದ ಬಗ್ಗೆ ಕಂಡು ಬಾರದೆ ಇದ್ದರು ಶ್ರೀ ಸಚಿದಾನಂದ ಭಾತ್ರ ರವರ ತಂದೆ ಶ್ರೀ ಗೋವಿಂದ ಭಾತ್ರ, ಚಿಕ್ಕಪ್ಪ ಕೇಶವ ಭಾತ್ರ, ಕೇಶವ ಭಾತ್ರರ ಮಗ ಚಂದ್ರಶೇಖರ ಭಾತ್ರ ಇವರುಗಳು ಆಡಳಿತ ಮೊಕ್ತೇಸರಿಕೆ ಮಾಡಿರುವುದರಿಂದ, ಅವರ ಕುಟುಂಬದವರು ಆಡಳಿತ ಮೊಕ್ತೇಸರಿಕೆ ಮಾಡಿರುವುದು ಕಂಡು ಬರುತ್ತದೆ. ಅದೇ ರೀತಿ ಶ್ರೀ ಶ್ರೀನಿವಾಸ ಭಾತ್ರ ಹಾಗೂ ಚಂದ್ರಶೇಖರ್ ಶೆಟ್ಟಿಯವರ ಬಗ್ಗೆ ಕುಂದಾಪುರ ತಹಶೀಲ್ದಾರ್ ರವರು ನೀಡಿದ ಅನುವಂಶಿಕ ಮೊಕ್ತೇಸರಿಕೆ ಕಂಡು ಬಾರದೆ ಇದ್ದರು, ಶ್ರೀ ಸಚ್ಚಿದಾನಂದ ಭಾತ್ರ ರವರ ತಂದೆ ಶ್ರೀ ಗೋವಿಂದ ಭಾತ್ರ, ಚಿಕ್ಕಪ್ಪ ಕೇಶವ ಭಾತ್ರ, ಕೇಶವ ಭಾತ್ರರ ಮಗ ಚಂದ್ರಶೇಖರ ಭಾತ್ರ ಇವರು ಶ್ರೀನಿವಾಶ ಭಾತ್ರರವರ ಕುಟುಂಬದವರೇ ಆದ್ದರಿಂದ ಅನುವಂಶಿಕೆ ಮೊಕ್ತೇಸರಿಕೆ ಮಾಡಿರುವುದು ಕಂಡು ಬರುತ್ತಿದೆ, ಇದಲ್ಲದೇ ಚಂದ್ರಶೇಖರ್ ಶೆಟ್ಟಿಯವರ ಹಿರಿತಲೆಯಾದ ದಿವಂಗತ ಮಂಜಯ್ಯ ಶೆಟ್ಟಿಯವರು ಮೊಕ್ತೆಸರಿಕೆ ಮಾಡಿರುತ್ತಾರೆಂದು ಸ್ಥಳೀಯರನ್ನು ವಿಚಾರಿಸಲಾಗಿ ತಿಳಿಯಿತ್ತೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ.

13. ದೇವಸ್ಥಾನಕ್ಕೆ ಸಂಬಂಧಪಟ್ಟ ನಿರ್ವಹಿಸಿದ ಕಾಮಗಾರಿಗಳ ವಿವರಗಳನ್ನು ತನಿಖಾಧಿಕಾರಿಯವರು 1993 ರಿಂದ ನಿರ್ವಹಿಸಿದ ಕಾಮಗಾರಿಗಳ ಬಗ್ಗೆ ಪರಿಶೀಲಿಸಿದ್ದು, ಕಾಮಗಾರಿಗಳನ್ನು ನಿರ್ವಹಿಸಲು ದೇವಸ್ಥಾನಕ್ಕೆ ಸಾಕಷ್ಟು ಆದಾಯ ಇರದೇ ಇದ್ದುದ್ದರಿಂದ, ತುಂಡು ಗುತ್ತಿಗೆಯಲ್ಲಿ ಕಾಮಗಾರಿ ನಿರ್ವಹಿಸಲಾಗಿರುತ್ತದೆ. ಆದರೆ, ಯಾವುದೇ ಅವ್ಯವಹಾರಗಳು ನಡೆದಿರುವುದು ಕಂಡು ಬರುವುದಿಲ್ಲ. ದೇವರ ಚಿನ್ನಭರಣ ಕಳವಾದ ಬಗ್ಗೆ ಶಂಕರ ನಾರಾಯಣ ಠಾಣೆಯಲ್ಲಿ ದೂರು ದಾಖಲಾಗಿ ತನಿಖೆ ನಡೆದಿದ್ದು ಆರೋಪಿ ಪತ್ತೆಯಾಗದಿದ್ದರಿಂದ 'ಸಿ' ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ

ಸಲ್ಲಿಸಲಾಗಿರುತ್ತದೆ. ನಂತರ ಆಡಳಿತ ಮಂಡಳಿಯವರು ಇನ್‌ಷುರೆನ್ಸ್ ಮೊತ್ತವನ್ನು ಪಡೆದಿರುತ್ತಾರೆ. ದೇವಸ್ಥಾನದ ಬಳಿ ಇರುವ ಸರ್ವೇ ನಂಬರ್ 101ರ ಸರ್ಕಾರಿ ಜಾಗದಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಗುಡ್ಡೆಯನ್ನು ಸಮತಟ್ಟು ಮಾಡಿದ್ದು, ಈ ಬಗ್ಗೆ ಯಾವುದೇ ಅನುಮತಿಯನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದಿರುವುದಿಲ್ಲ. ಆದರೆ, ಆ ಜಾಗವನ್ನು ಅಕ್ರಮ ಸಕ್ರಮದಡಿ ದೇವಸ್ಥಾನದ ಹೆಸರಿಗೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಲಾಗಿರುತ್ತದೆ. ಈ ಬಗ್ಗೆ ಮುಂದಿನ ಕ್ರಮ ಕೈಗೊಳ್ಳುವುದಾಗಿ ಕುಂದಾಪುರದ ತಹಶೀಲ್ದಾರ್‌ರವರು ತಿಳಿಸಿರುತ್ತಾರೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೇವಸ್ಥಾನದ ಸಹಾಯಕ ಅರ್ಚಕ ಹಾಗೂ ಮ್ಯಾನೇಜರ್ ಮೇಲೆ ಮಾಡಿದ ಕಳ್ಳತನದ ಆರೋಪವು ಆಧಾರರಹಿತವಾಗಿರುತ್ತದೆ. ಸಹಾಯಕ ಆಯುಕ್ತರು ದತ್ತಿ ಮತ್ತು ಧರ್ಮದಾಯ ಇಲಾಖೆಯ ಸಹಾಯಕ ಆಯುಕ್ತರು ಆದ ಶ್ರೀ ದೊಡ್ಡಮನಿಯವರು ಆಡಳಿತ ಮೊಕ್ತೇಸರರೊಡನೆ ಅವ್ಯವಹಾರಗಳಿಗೆ ಬೆಂಗಾವಲಾಗಿ ನಿಂತಿದ್ದಾರೆ ಎನ್ನುವುದಕ್ಕೆ ಯಾವುದೇ ಪುರಾವೆ ಇರುವುದಿಲ್ಲ. ಮೊಕ್ತೇಸರರಾದ ಸಚ್ಚಿದಾನಂದ ಛಾತ್ರರು ಬಸ್ಸುಗಳನ್ನು, ಟ್ರಾಕ್ಟರ್‌ಗಳನ್ನು ಬ್ಯಾಂಕ್ ನಿಂದ ಸಾಲ ಪಡೆದು ನಡೆಸುತ್ತಿರುವುದಾಗಿ ದಾಖಲೆಗಳಿಂದ ತಿಳಿದುಬಂದಿರುತ್ತದೆ. ದೇವಸ್ಥಾನದ ಹಣ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ಶ್ರೀ ನಾಗಭೂಷಣ್ ಭಟ್ ಹಾಗೂ ಡಾ. ಕೃಷ್ಣರಾವ್ ಹಾಗೂ ದೇವಸ್ಥಾನದ ಆಡಳಿತ ಮೊಕ್ತೇಸರರ ಬಗ್ಗೆ ಜಾಗದ ಬಗ್ಗೆ ತಕರಾರು ಇದ್ದು, ಆಡಳಿತ ಮಂಡಳಿಯವರು ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುವುದರಿಂದ, ಅವರುಗಳು ದೂರುದಾರರಾದ ಶ್ರೀ ಸುಬ್ರಹ್ಮಣ್ಯರವರನ್ನು ಮುಂದಿಟ್ಟುಕೊಂಡು ದೂರು ಅರ್ಜಿ ಸಲ್ಲಿಸಿರುತ್ತಾರೆಂದು ತಿಳಿದು ಬಂದಿದೆ ಎಂದು ತನಿಖಾಧಿಕಾರಿಯವರು ತಮ್ಮ ತನಿಖಾ ವರದಿಯಲ್ಲಿ ತಿಳಿಸಿರುತ್ತಾರೆ.

14. ದೂರಿನಂಶಗಳನ್ನು, ತನಿಖಾ ವರದಿಯನ್ನು, ಎದುರುದಾರರ ಆಕ್ಷೇಪಣೆಯನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಮುಖ್ಯವಾಗಿ, ಕಮಲಶಿಲೆಯ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಾಲಯದ ಆಡಳಿತ ಮಂಡಳಿ ಮತ್ತು ಸದರಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿರುವುದೋ? ಅಥವಾ ಸದರಿ ದೇವಸ್ಥಾನದ ಆಡಳಿತ ಮಂಡಳಿಯ ಹುದ್ದೆಯು ಅಧ್ಯಕ್ಷರ ಮತ್ತು ಆಡಳಿತ ಮಂಡಳಿಯ ಸದಸ್ಯರುಗಳ ಹುದ್ದೆಯೋ? ವಂಶಪಾರಂಪರಿಕವೋ? ಎಂಬುದು ಮುಖ್ಯವಾಗಿ ನಿರ್ಣಯಗೊಳ್ಳಬೇಕಾಗಿದ್ದಂತಹ ವಿಷಯವಾಗಿರುತ್ತದೆ. ಅದರಂತೆ, ಈ ಸಂಸ್ಥೆಗೆ ಸದರಿ ದೂರಿನ ಬಗ್ಗೆ ತನಿಖೆ ಕೈಗೊಳ್ಳಲು ಅಧಿಕಾರ ವ್ಯಾಪ್ತಿ ಇದೆಯೋ ಇಲ್ಲವೋ ಎಂಬುದನ್ನು ಪರಿಗಣಿಸಬಹುದಾಗಿರುತ್ತದೆ. ಪ್ರಸಕ್ತ ಪ್ರಕರಣದಲ್ಲಿ ದೂರುದಾರರು ತಮ್ಮ ವಕೀಲರ ಮುಖೇನ ಗೌರವಾನ್ವಿತ ಉಪಲೋಕಾಯುಕ್ತರವರ ಮುಂದೆ ದಿನಾಂಕ 29/12/2015 ರಂದು ಹಾಜರಾಗಿದ್ದು, 1 ಮತ್ತು 3ನೇ ಎದುರುದಾರರ ಪರವಾಗಿ ವಕೀಲರು ಹಾಜರಾಗಿದ್ದು, ಸದರಿಯವರು ಕಮಲಶಿಲೆಯ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಾಲಯಕ್ಕೆ ಸರ್ಕಾರದಿಂದ ಯಾವುದೇ ಸಹಾಯದನವನ್ನು ಪಡೆಯುತ್ತಿಲ್ಲವೆಂದು, 3ನೇ ಎದುರುದಾರರು ವಂಶಪಾರಂಪರೆಯ ವ್ಯವಸ್ಥಾಪಕ ಟ್ರಸ್ಟಿಯಾಗಿರುತ್ತಾರೆ. ಆದ್ದರಿಂದ, ಈ ಸಂಸ್ಥೆಗೆ ದೂರುದಾರರು ಮಾಡಿರುವ ಆರೋಪದ ಬಗ್ಗೆ ತನಿಖೆ ನಿರ್ವಹಿಸಲು ಅಧಿಕಾರ

ವ್ಯಾಪ್ತಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ತಹಶೀಲ್ದಾರ್‌ರವರು ದೂರುದಾರರಿಗೆ ಹಿಂಬರಹ (endorsement) ವನ್ನು ನೀಡಿದ್ದು, ಅದರ ಮೇರೆಗೆ ದೂರುದಾರರು ಮೇಲ್ಮನವಿಯನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಮಲಶಿಲೆಯ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಸ್ಥಾನದ ಟ್ರಸ್ಟಿನ ಬಗ್ಗೆ ವ್ಯಾಜ್ಯವಿದ್ದು, ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಯವರು, ಉಡುಪಿ ಜಿಲ್ಲಾ ಹಿಂದು ಧಾರ್ಮಿಕ ಮತ್ತು ದತ್ತಿ ಉಂಬಳಿ ಇಲಾಖಾ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಈ ತಕರಾರಿನ ಬಗ್ಗೆ ಪ್ರಕರಣ ಕ್ರ-ಡಿಬಿಎಸ್-ಎಲ್‌ಎಡಬ್ಲ್ಯೂ:ಸಿಆರ್71-97-98ರ ಪ್ರಕರಣವಿದ್ದು, ಇದರಲ್ಲಿ ತೀರ್ಪನ್ನು ನೀಡಲಾಗಿದ್ದು, ಸದರಿ ತೀರ್ಪಿನನ್ವಯ ಅರ್ಜಿದಾರರನ್ನು ವಂಶಪಾರಂಪರಿಕ ವ್ಯವಸ್ಥಾಪಕ ಟ್ರಸ್ಟಿ ಎಂದು ತೀರ್ಮಾನಿಸಿರುವುದು ಹಾಜರುಪಡಿಸಿರುವ ತೀರ್ಪಿನ ಪ್ರತಿಯಿಂದ ಕಂಡು ಬರುತ್ತದೆ. (ಸದರಿ ತೀರ್ಪಿನ ಪ್ರತಿಯನ್ನು ಹಾಜರುಪಡಿಸಲಾಗಿದೆ). ಈ ತೀರ್ಪಿನ ವಿರುದ್ಧ ದೂರುದಾರರಾಗಲೀ ಅಥವಾ ಸಂಬಂಧಿಸಿದ ಇನ್ನಿತರೆ ವ್ಯಕ್ತಿಗಳಾಗಲೀ ಮೇಲ್ಮನವಿ ಸಲ್ಲಿಸಿರುವುದು ಕಂಡು ಬರುವುದಿಲ್ಲ. ಸದರಿ ತೀರ್ಪಿನಲ್ಲಿ ಪುಟ 5 ರಲ್ಲಿ "1ನೇ ಅರ್ಜಿದಾರರ ಕುಟುಂಬದವರು ಶೇಕಡ 25 ಭಾಗದಷ್ಟು ದೇವಸ್ಥಾನದ ಅಭಿವೃದ್ಧಿಯನ್ನು ಅವರ ಸ್ವಂತದಿಂದಲೇ ಮಾಡಿರುವುದು ಅವರ ಸಾಕ್ಷಿಯಿಂದ ತಿಳಿದು ಬರುತ್ತದೆ. ಈ ಮೂರು ಕುಟುಂಬದವರಲ್ಲದೇ, ಬೇರೆಯಾರು ಮೊಕ್ತೇಸರರಾಗಿದ್ದಿದ್ದು ಕಂಡು ಬರುವುದಿಲ್ಲ. ತಲೆ ತಲಾಂತರದಿಂದ ಈ ದೇವಸ್ಥಾನದಮೊಕ್ತೇಸರಿಕೆಯು ಈ ಮೂರು ಕುಟುಂಬದವರಲ್ಲಿಯೇ ಇರುವುದು ಕಂಡು ಬರುತ್ತದೆ. ದೇವಸ್ಥಾನದ ಅಭಿವೃದ್ಧಿಯನ್ನು ಈ ಮೂರು ಕುಟುಂಬದ ಈಗಿನ ಮೊಕ್ತೇಸರರಾದ ಅರ್ಜಿದಾರರು ಹಾಗೂ ಅವರ ಹಿರಿಯರು ದೇವಸ್ಥಾನದಿಂದ ಯಾವುದೇ ಪ್ರತಿಪಲ ನಿರೀಕ್ಷಿಸದೇ ಸೇವಾ ಮನೋಭಾವದಿಂದ ಮಾಡಿರುವುದಾಗಿ ಅವರ ವಿಚಾರಣೆಯಿಂದ ತಿಳಿದು ಬರುತ್ತದೆ. ಇನ್ನು ದಾಖಲೆಗಳನ್ನು ಪರಿಶೀಲಿಸಿದಾಗ 1ನೇ ಅರ್ಜಿದಾರರ ಕುಟುಂಬದವರೇ ಇಲ್ಲಿಯವರೆಗೆ ಆಡಳಿತ ಮೊಕ್ತೇಸರರಾಗಿ ಉಳಿದ 2 ಮತ್ತು 3ನೇ ಅರ್ಜಿದಾರರ ಕುಟುಂಬದವರು ಸಹ ಮೊಕ್ತೇಸರರಾಗಿ ಆಡಳಿತ ನೋಡಿಕೊಂಡು ಬಂದಿರುವುದು ಕಂಡು ಬರುತ್ತದೆ. ದೇವಸ್ಥಾನದ ಈಗಿನ ಅಭಿವೃದ್ಧಿಯನ್ನು ಹೊಂದಲು ಅರ್ಜಿದಾರರು ಹಾಗೂ ಅವರ ಕುಟುಂಬದವರೇ ಕಾರಣರಾಗಿರುವುದು ವಿಚಾರಣೆಯಿಂದ ತಿಳಿದು ಬರುತ್ತದೆ................". ಆದ್ದರಿಂದ, ಈ ಅಂಶಗಳನ್ನು ಪರಿಶೀಲಿಸಿದಲ್ಲಿ ಹಾಗೂ ಎದುರುದಾರರು ಸದರಿ ಶ್ರೀ ಸಚ್ಚಿದಾನಂದ ಛಾತ್ರ, ಶ್ರೀ ಶ್ರೀನಿವಾಸ ಛಾತ್ರ ಮತ್ತು ಶ್ರೀ ಚಂದ್ರಶೇಖರ ಶೆಟ್ಟಿ ಇವರುಗಳು ಕಮಲಶಿಲೆಯ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಸ್ಥಾನದ ವಂಶಪಾರಂಪರಿಕ ಮೊಕ್ತೇಸರರು ಅಲ್ಲವೆಂದು ತೋರಿಸುವಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದಿರುವ ಹಿನ್ನೆಲೆಯಲ್ಲಿ, ಸದರಿ ಕಮಲಶಿಲೆಯ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿರುವುದಾಗಿ ಮುಜರಾಯಿ ಇಲಾಖೆಯ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಎಂದು ಮುಜರಾಯಿ ಇಲಾಖೆಯವರು ತಿಳಿಸಿರುತ್ತಾರೆ. ಆದ್ದರಿಂದ, ಪ್ರಕರಣದಲ್ಲಿ ತನಿಖಾಧಿಕಾರಿಯವರು ತಿಳಿಸಿರುವಂತೆ ದೇವಸ್ಥಾನದ ವ್ಯವಹಾರಗಳಿಗೆ ಸಂಬಂಧಿಸಿದಂತೆ 1993 ರಿಂದ 2005-06ನೇ ಸಾಲಿನವರೆಗೆ ಮಾತ್ರ ಲೆಕ್ಕಪರಿಶೋಧನೆಯಾಗಿದ್ದು, 2007 ರಿಂದ 2015ನೇ ಇಸವಿಯವರೆಗೆ

ಲೆಕ್ಕಪರಿಶೋಧನೆಯಾಗಿರುವುದಿಲ್ಲವೆಂದು ಕಂಡು ಬರುತ್ತದೆ. 2007ರ ನಂತರ ಲೆಕ್ಕಪತ್ರಗಳ ಆಡಿಟ್ ಮಾಡದೇ ಇರುವುದರಿಂದ ದೇವಸ್ಥಾನದ ಆಡಳಿತದಲ್ಲಿ ಮೇಲೆ ಹೇಳಿದ 2007 ರಿಂದ 2015ರವರೆಗೆ ಲೆಕ್ಕ ವ್ಯವಹಾರದಲ್ಲಿ ಅವ್ಯವಹಾರ ಆಗಿದೆಯೋ ಇಲ್ಲವೋ ಎಂದು ತೀರ್ಮಾನಿಸಲು ಸಾಧ್ಯವಿರುವುದಿಲ್ಲ. ಇದಲ್ಲದೇ, ಪ್ರತಿ ವರ್ಷ ಧಾರ್ಮಿಕ ದತ್ತಿ ಇಲಾಖಾ ವತಿಯಿಂದ ದೇವಸ್ಥಾನದ ತಪಶೀಲು ಪಟ್ಟಿ ರಿಜಿಸ್ಟರ್ ಅನುಸಾರವಾಗಿ ದೇವಸ್ಥಾನದ ಆಭರಣಗಳು ಮತ್ತು ಇನ್ನಿತರೆ ವಸ್ತುಗಳ ಆಸ್ತಿಗಳ ಸತ್ಯಾಪನೆ ಮಾಡಿ ವರದಿಯನ್ನು ಸಮಿತಿಗೆ ಮತ್ತು ನೇಮಿಸಲಾದ ಪ್ರಾಧಿಕಾರಕ್ಕೆ ನೀಡಬೇಕಾಗಿರುತ್ತದೆ. ಸಹಾಯಕ ಆಯುಕ್ತರು ದೇವಸ್ಥಾನದ ಪ್ರತಿ ಆರ್ಥಿಕ ವರ್ಷದ ಕೊನೆಯಲ್ಲಿ ದೇವಸ್ಥಾನಕ್ಕೆ ಸೇರ್ಪಡೆಯಾಗಿರುವ ಚಿನ್ನ, ಬೆಳ್ಳಿಗಳ ಪಟ್ಟಿಯನ್ನು ಕಳುಹಿಸಿಕೊಡುವಂತೆ ಪತ್ರ ಬರೆಯಲಾಗಿದ್ದು, ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲವೆಂದು ಸಹಾಯಕ ಆಯುಕ್ತರು ತಮ್ಮ ವರದಿಯಲ್ಲಿ ತಿಳಿಸಿರುವುದು ಕಂಡು ಬರುತ್ತದೆ.

15. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **2007 ರಿಂದ ಇಲ್ಲಿಯವರೆಗಿನ ಕಮಲಶಿಲೆ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಸ್ಥಾನದ ವ್ಯವಹಾರಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆ ನಡೆಸಿ ಲೆಕ್ಕಪರಿಶೋಧನಾ ವರದಿಯ ಅನುಸಾರ ಕಾನೂನಿನಡಿ ಸೂಕ್ತ ಕ್ರಮ ಜರುಗಿಸುವಂತೆ ಹಾಗೂ ಸದರಿ ಕಮಲಶಿಲೆ ಶ್ರೀ ಬ್ರಾಹ್ಮೀ ದುರ್ಗಾಪರಮೇಶ್ವರಿ ದೇವಸ್ಥಾನದ ತಪಶೀಲು ಪಟ್ಟಿ ರಿಜಿಸ್ಟರ್ ಅನುಸಾರವಾಗಿ ದೇವಸ್ಥಾನದ ಆಭರಣಗಳು ಹಾಗೂ ಇನ್ನಿತರೆ ವಸ್ತುಗಳ ಮತ್ತು ಆಸ್ತಿಗಳ ಬಗ್ಗೆ ಸತ್ಯಾಪನೆ ಮಾಡಿದ ವರದಿಯನ್ನು ದೇವಸ್ಥಾನದ ಆಡಳಿತ ಮಂಡಳಿಯಿಂದ ಸಹಾಯಕ ಆಯುಕ್ತರ ಕಛೇರಿಗೆ ಪಡೆದು ಪರಿಶೀಲಿಸಿ, ನ್ಯೂನತೆಗಳಿದಲ್ಲಿ ಕಾನೂನಿನಡಿ ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.

10/4/17